ಲಕ್ಷ ಪ್ಲಾನ್ ಎಕ್ಸ್‌ಪೆಂಡಿಚರ್ ಅದಕ್ಕೆ ಒಪ್ಪಿಗೆ ಕೊಡುವುದರಲ್ಲಿ ಯಾವ್ಯಾವುದು ತೊಂದರೆ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಉಳಿದಿರತಕ್ಕ ವಿವರಗಳಿಗೆ ನಾನು ಹೋಗದೆ ಈವೊಂದು ಅಂದಾಜುಪೂರಕ ಬೇಡಿಕೆಗಳನ್ನು ನಾವೇನು ಇಟ್ಟಿದ್ದೇವೆ ಅದಕ್ಕೆ ತಾವುಗಳೆಲ್ಲ ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ನಾನು ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ:

"ಮಾರ್ಚಿ 31ರೊಳಗೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೂರಕಬೇಡಿಕೆಗಳ ಸಂಖ್ಯೆ 1,3,6,7,9,10,14,19,22,24,29,30,33,36,38,41,42,43,46,47,49,50,52,53,54,56,58, ಮತ್ತು 60 ಇವುಗಳಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಪಟ್ಟಿಯಲ್ಲಿ ಸೂಚಿಸಿದ ಮೊತ್ತಕ್ಕೆ ಇನ್ನು ಹೆಚ್ಚಿನ ಮೊಬಲಗನ್ನು ಮಂಜೂರು ಮಾಡುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

4) ರಾಜ್ಯದಲ್ಲಿ ಡೀಸೆಲ್ ಅಭಾವದ ಕುರಿತು

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಉಪಾಧ್ಯಕ್ಷೆಣೀಯವರೆ, ಮಾನ್ಯ ಮುಖ್ಯ ಮಂತ್ರಿಗಳು ಹೋಗುತ್ತಿರುವುದರಿಂದ ಅವರ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ಪ್ರಮುಖ ವಿಷಯದ ಬಗ್ಗೆ ಸದನದಲ್ಲಿ ಚರ್ಚೆ ಮಾಡಿ ರಾಜ್ಯದಲ್ಲಿ ಡೀಸೆಲ್ ಅಭಾವವಿದೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದೂ ಪ್ರಧಾನ ಮಂತ್ರಿಗಳವರ ಜೊತೆಯಲ್ಲಿ ಮಾತನಾಡಬೇಕೆಂದು ಹೇಳಿದ್ದೆವು. ಸೋಮವಾರದೊಳಗೆ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇನೆಂದಿದ್ದರು. ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆಂದು ಹೇಳಿದ್ದರು. ಇರತಕ್ಕ ಅಭಾವ ಪರಿಸ್ಥಿತಿಯನ್ನು ಸುಧಾರಣೆ ಮಾಡಲಿಕ್ಕೆ ಏನು ಮಾಡಿದ್ದಾರೆನ್ನುವುದನ್ನು ಸದನಕ್ಕೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೇನೆಂದು ಹೇಳಿದ್ದರು. ಬೆಂಗಳೂರಿಗೆ ಅವರು ಬಂದಾಗ ಭೇಟಿ ಮಾಡಬೇಕೆಂದು ನಾವು ಸಹ ಹೇಳಿದ್ದೆವು. ಅವರ ಜೊತೆಯಲ್ಲಿ ಮಾತನಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮೊನ್ನೆ ಅವರು ಬಂದಾಗ ಮಾತನಾಡಿದ್ದಾರೆಯೇ ಹೇಗೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಮುಖ್ಯ ಮಂತ್ರಿಗಳಿಗೆ ಸಮಯ ಇಲ್ಲದಿದ್ದರೆ ಬೇರೆ ಸಮಯದಲ್ಲಿ ಉತ್ತರ ಕೊಡಬಹುದು ಕಳೆದ ಎರಡು ಮೂರು ದಿವಸಗಳಿಂದ, ಹಿಂದೆ ಎಂದೂ ಇಲ್ಲದ ಅಭಾವ ಉಂಟಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ಸುಗಳು ಓಡಾಡುತ್ತಿಲ್ಲ. ಡೀಸೆಲ್ ಅಭಾವ ಜಾಸ್ತಿಯಾಗುತ್ತಿದೆ. ಪ್ರತಿಯೊಂದು ಪೆಟ್ರೋಲ್‌ಬಂಕ್‌ಗಳ ಮುಂದೆ ನೂರಾರು ಬಸ್‌ಗಳು ಲಾರಿಗಳು, ನಿಂತುಕೊಳ್ಳುವ ದೃಶ್ಯವನ್ನು ನೋಡುತ್ತಿದ್ದೇವೆ. ಈಗಿನ ಪ್ರಧಾನ ಮಂತ್ರಿಗಳು ಅಧಿಕಾರಕ್ಕೆ ಬಂದ ಮೇಲೆ ಡೀಸೆಲ್ ಅಭಾವ ಜಾಸ್ತಿಯಾಗಿದೆ.

ಶ್ರೀ ಎಸ್.ಬಂಗಾರಪ್ಪ:– ಮಾನ್ಯ ಉಪಾಧ್ಯಕ್ಷೆಣೀಯವರೆ, ಡೀಸೆಲ್ ವಿಚಾರದಲ್ಲಿ ಇದು ಕರ್ನಾಟಕ ರಾಜ್ಯಕ್ಕೆ ಸೀಮಿತಕೊಂಡಿರತಕ್ಕ ವಿಚಾರ ಅಲ್ಲ. ರಾಷ್ಟ್ರ ವ್ಯಾಪ್ತಿ ಉದ್ಭವವಾಗಿರತಕ್ಕ ವಿಚಾರ. ಅದರ ಬಗ್ಗೆ ಮೊನ್ನೆ ಪ್ರಧಾನ ಮಂತ್ರಿಗಳವರ ಜೊತೆಯಲ್ಲಿ ಮಾತನಾಡಿದ್ದೇನೆ. ಖಾಸಗಿಯಾಗಿ ಕೂಡ ಮಾತನಾಡಿದ್ದೇನೆ. ಅದರ ಜೊತೆಗೆ ವಿಜಯನಗರ ಸ್ಟೀಲ್‌ಪ್ಲಾಂಟ್, ಹಾಗೆಯೇ ಸುಮಾರು ನಾಲ್ಕೈದು ವಿಚಾರಗಳ ಬಗ್ಗೆ ಸಿಕ್ಕಿರತಕ್ಕ ಸಮಯವನ್ನು ನಾನು ವ್ಯಯ ಮಾಡುವುದಕ್ಕೆ ಬಿಟ್ಟಿಲ್ಲ. ಈ ವಿಚಾರದಲ್ಲಿ ಮಾತುಕತೆಗೆ ಕರೆದಿದ್ದಾರೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ನಮ್ಮ ರಾಜ್ಯದ ಕೇಂದ್ರ ಮಂತ್ರಿಗಳಾದ ಬಸವರಾಜ್ ಪಾಟೀಲ್ ಅನ್ವರಿಯವರ ಜೊತೆ ಕೂಡ ಮಾತನಾಡಿದ್ದೇನೆ. ಪುನಃ ಮುಂದಿನ ತಿಂಗಳು ನಾನು ದೆಹಲಿಗೆ ಹೋದಾಗ ಬಸವರಾಜ್ ಪಾಟೀಲ್ ಅನ್ವರಿಯವರನ್ನು ಸೇರಿಸಿಕೊಂಡು ಪ್ರಧಾನ ಮಂತ್ರಿಗಳವರ ಜೊತೆಯಲ್ಲಿ ಮಾತನಾಡುತ್ತೇನೆ. ಡೀಸೆಲ್ ಅಭಾವದ ಬಗ್ಗೆ ತಾವೇನು ಹೇಳುತ್ತೀರಿ ಅದರ ಬಗ್ಗೆ ಕೂಡಲೇ ಕ್ರಮ ತೆಗೆದು ಕೊಳ್ಳಲಾಗುವುದು. ಮೊನ್ನೆ ಶೇಕಡ 10ರಷ್ಟು ಕಡಿತದ ವಿಚಾರದಲ್ಲಿ ತೆಗೆದುಕೊಂಡಿರತಕ್ಕ ತೀರ್ಮಾನವನ್ನು ತಾವು ಪತ್ರಿಕೆಗಳಲ್ಲಿ ಓದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಕೆಲವು ಜಿಲ್ಲೆಗಳಲ್ಲಿ ಡೀಸೆಲ್ ಪಡಿತರ ವ್ಯವಸ್ಥೆ ಮಾಡಿದ್ದಾರೆ. ಮೈಸೂರಿನಲ್ಲಿ ಟ್ರಾಕ್ಟರ್‌ಗೆ ಇಷ್ಟು ಬಸ್ಸುಗಳಿಗೆ ಇಷ್ಟು ಕಾರುಗಳಿಗೆ ಇಷ್ಟು ಲಾರಿಗಳಿಗೆ ಇಷ್ಟು ಎಂದು ಕೊಡುತ್ತಿದ್ದಾರೆ. ಈ ಪರಿಸ್ಥಿತಿ ಎಲ್ಲ ಕಡೆ ಉದ್ಭವವಾಗುತ್ತದೆ. ಅದರ ಬಗ್ಗೆ ಏನು ಮಾಡುತ್ತೀರಿ? ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ತಮ್ಮ ನಿಲುವನ್ನು ನಾನು ಸ್ವಾಗತಿಸುತ್ತೇನೆ. 19 ವರ್ಷಗಳಿಂದ ಇದು ಹಾಗೆಯೇ ಬರುತ್ತಿದೆ. ಹಿಂದೆ ಒಂದು ಸಾರಿ ಇದ್ದಕ್ಕಿದ್ದಹಾಗೆ ವಿಜಯನಗರ ಉಕ್ಕು ಕಾರ್ಖಾನೆಗೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆಂದು ಸದನದಲ್ಲಿ ಅಭಿನಂದನೆಗಳನ್ನು ಹತ್ತು ವರ್ಷಗಳ ಹಿಂದೆ ಸಲ್ಲಿಸಲಾಗಿದೆ. ಈ ಸಲ ಸಹ ಹಾಗೆ ಆಗುವುದು ಬೇಡ. ಕೆಲಸ ಪರಿಣಾಮಕಾರಿಯಾಗಿ ಆಗಲಿ, ಇಲ್ಲವೆನ್ನುವುದಾದರೆ ಅದನ್ನು ಕೇಳೋಣ.

ಶ್ರೀ ಎಸ್. ಬಂಗಾರಪ್ಪ:– ನಾನು ನಿಮ್ಮನ್ನು ಅಭಿನಂದನೆಗಳನ್ನು ಸಲ್ಲಿಸಿ ಎಂದು ಕೇಳಲಿಲ್ಲ. ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಸಮಯವಿದೆ. ಮೊದಲು ಡೀಸೆಲ್ ಅಭಾವದ ಬಗ್ಗೆ ವಿಚಾರ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ಹಿಂದೆ ಆದದ್ದನ್ನು ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ:– ಡೀಸೆಲ್ ವಿಚಾರದ ಬಗ್ಗೆ ಒತ್ತಡ ತಂದಿದ್ದೇವೆ. ಇದು ದೇಶದಲ್ಲಿರತಕ್ಕ ಸಮಸ್ಯೆ. ಅದನ್ನು ತಿಳಿಸಿದ್ದೇವೆ.

ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ (ಮುಂದುವರಿದುದು)

ಶ್ರೀ ಕೆ. ಲಕ್ಕಪ್ಪ (ಕುಣಿಗಲ್):– ಮಾನ್ಯ ಸಭಾಧ್ಯಕ್ಷೆಯವರೇ, ಹಿಂದೆ ನಾನು ಅಭಾವ ಪರಿಸ್ಥಿತಿ ಬಗ್ಗೆ ಗಮನಸೆಳೆದು.....

† ಶ್ರೀ ಎಲ್.ಆರ್. ಶಿವರಾಮೇಗೌಡ:– ಕಾರ್ಯಕ್ರಮ ಕಲಾಪದಲ್ಲಿ ಕೋಮು ಗಲಭೆ ಮತ್ತು ಬರ ಪರಿಹಾರದ ಬಗ್ಗೆ ನಾವು 68ನೇ ನಿಯಮದ ಪ್ರಕಾರ ಸದನದಲ್ಲಿ ಚರ್ಚೆಯಾಗಬೇಕೆಂದು ಸರ್ಕಾರದ ಗಮನವನ್ನು ಸೆಳೆದಿದ್ದೇವೆ. ಮೊನ್ನೆ ಕೋಮು ಗಲಭೆ ಬಗ್ಗೆ ಚರ್ಚೆ ನಡೆಯುವಾಗ ನಮ್ಮನ್ನು ಕರೆಯಲಿಲ್ಲ ಈಗಲೂ ಸಹ ಸದಸ್ಯರ ಹೆಸರನ್ನು ಕರೆಯಬೇಕಾದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿರತಕ್ಕಂಥವರ ಹೆಸರನ್ನು ಮೊದಲು ಕರೆದು ನಂತರ ಬೇರೆಯವರದ್ದು ಕರೆಯಬೇಕು. ಈಗ ಶ್ರೀ ಲಕ್ಕಪ್ಪನವರನ್ನು ಕರೆದಿರುವುದಕ್ಕೆ ನಮ್ಮ ಆಕ್ಷೇಪ ಇಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿದ್ದವರಿಗೆ ಮೊದಲ ಆದ್ಯತೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ